ಸಂಖ್ಯೆ: ಆಡಳಿತ(1)61/ಸಿಜಿಓ/2018-19

ಇವರಿಗೆ

03-12-2019

ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು,
ಒಳಾಡಳಿತ ಇಲಾಖೆ,
ವಿಧಾನಸೌಧ,
ಬೆಂಗಳೂರು.

ಮಾನ್ಯರೆ,

ವಿಷಯ: ವಿಧಾನ ಮಂಡಲದ ಉಭಯ ಸದನಗಳಿಗೆ ವಾರ್ಷಿಕ ವರದಿ ಮತ್ತು ಕಾರ್ಯನಿರ್ವಹಣಾ ಮುಂಗಡಗಳನ್ನು ಸಲ್ಲಿಸುವ ಬಗ್ಗೆ.

ಉಲ್ಲೇಖ: ಸರ್ಕಾರದ ಪತ್ರ ಸಂಖ್ಯೆ. ಒಇ 03 ಸಶಾಸ 2019. ದಿನಾಂಕ: 29-11-2019.

***

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖಿತ ಪತ್ರದಲ್ಲಿ ನಿರ್ದೇಶಿಸಿರುವ ಮೇರೆಗೆ ಗೃಹರಕ್ಷಕ ಮತ್ತು ಪೌರರಕ್ಷಣಾ ಇಲಾಖೆಯ 2018-19 ನೇ ಸಾಲಿನ ವಾರ್ಷಿಕ ವರದಿಯ ಆಂಗ್ಲ ಮತ್ತು ಕನ್ನಡ ಭಾಷೆಯ ಪ್ರತಿಗಳನ್ನು ಹಾಗೂ 2019-20ನೇ ಸಾಲಿನ ಗೃಹರಕ್ಷಕ ಮತ್ತು ಪೌರರಕ್ಷಣಾ ಇಲಾಖೆಯ ಕಾರ್ಯನಿರ್ವಹಣಾ ಮುಂಗಡಗಳನ್ನು ಈಗಾಗಲೇ ಸರ್ಕಾರಕ್ಕೆ ಕಳುಹಿಸಲಾಗಿದ್ದು, ಆದರೆ, ಸ್ವೀಕೃತವಾಗಿರುವುದಿಲ್ಲವೆಂದು ನಿರ್ದೇಶಿಸಿರುವ ಮೇರೆಗೆ ಮತ್ತೊಮ್ಮೆ ಸದರಿ ಪತ್ರಗಳ ಪ್ರತಿಗಳನ್ನು ಈ ಪತ್ರದೊಂದಿಗೆ ಲಗತ್ತಿಸಿ ತಮ್ಮ ಅವಗಾಹನೆಗಾಗಿ ಕಳುಹಿಸಲಾಗಿದೆ.

ತಮ್ಮ ನಂಬುಗೆಯ,

ರವಾನಿಸಲಾಗಿದೆ
Dt. 3-12-19
Despatched

(ರೇಣುಕಾ ಕೆ.ಸುಕುಮಾರ್, ಐಪಿಎಸ್)
ಡಿಸಿಜಿ
ಆರಕ್ಷಕ ಮಹಾ ನಿರ್ದೇಶಕರು
ಗೃಹರಕ್ಷಕದಳದ ಮಹಾ ಸಮಾದೇಷ್ಟರು
ಮತ್ತು ನಿರ್ದೇಶಕರು, ಪೌರರಕ್ಷಣೆ
ಇವರ ಪರವಾಗಿ.

ಪ್ರತಿ: ಸರ್ಕಾರದ ಅಧೀನ ಕಾರ್ಯದರ್ಶಿ(ಪ್ರ), ಒಳಾಡಳಿತ ಇಲಾಖೆ(ಸಮನ್ವಯ), ವಿಧಾನಸೌಧ, ಬೆಂಗಳೂರು.

GOVERNMENT OF KARNATAKA



# ಕರ್ನಾಟಕ ಗೃಹರಕ್ಷಕ ದಳ ಮತ್ತು ಪೌರರಕ್ಷಣಾ ಇಲಾಖೆ

## ವಾರ್ಷಿಕ ವರದಿ – 2018-19

## ಮತ್ತು

## ನಿರ್ವಹಣಾ ಮುಂಗಡ ಪತ್ರದ ವರದಿ 2019-20

## ಕರ್ನಾಟಕ ಗೃಹರಕ್ಷಕ ಮತ್ತು ಪೌರರಕ್ಷಣಾ ಇಲಾಖೆಗಳ 2018-19 ನೇ ಸಾಲಿನ ವಾರ್ಷಿಕ ವರದಿ

### ಹೊಳಹುಗಳು

**ಗೃಹರಕ್ಷಕದಳ:-**

ಕರ್ನಾಟಕ ಗೃಹರಕ್ಷಕ ಕಾಯಿದೆ 1962 (1962 ರ ಕಾಯಿದೆ ಸಂಖ್ಯೆ 35) ರಲ್ಲಿ ಈ ಇಲಾಖೆಯು ರಚಿತಗೊಂಡಿವೆ. ರಾಜ್ಯದಲ್ಲಿನ ಗೃಹರಕ್ಷಕ ಸಂಸ್ಥೆಯು ಒಂದು ಸ್ವತಂತ್ರವಾದ, ಶಿಸ್ತುಬದ್ಧ ಹಾಗೂ ಸಮವಸ್ತ್ರಧಾರಿ ಸ್ವಯಂ ಸೇವಕರನ್ನು ಒಳಗೊಂಡಿದೆ.

1948 ರಲ್ಲಿ ಗೃಹರಕ್ಷಕದಳ ಎಂಬ ನೂತನ ಸ್ವಯಂ ಸೇವಕ ಸಂಸ್ಥೆಯೊಂದು ಹೊಸದಾಗಿ ಬೊಂಬಾಯಿಯಲ್ಲಿ ಪ್ರಾರಂಭಗೊಂಡಿತು. ಆಗ ಮುಂಬೈ ಪ್ರಾಂತ್ಯದ ಭಾಗಗಳಾಗಿದ್ದ ಬೆಳಗಾವಿ, ಬಿಜಾಪುರ, ಉತ್ತರಕನ್ನಡ ಹಾಗೂ ಧಾರವಾಡ ಜಿಲ್ಲೆಗಳಲ್ಲಿ ಕಾರ್ಯ ನಿರ್ವಹಿಸುತ್ತಿದ್ದ ಗೃಹರಕ್ಷಕರ ಸಂಸ್ಥೆಯು, ದಿನಾಂಕ: 01-11-1956 ರಲ್ಲಿ ಭಾಷಾವಾರು ಪ್ರಾಂತ್ಯಗಳ ರಾಜ್ಯಗಳನ್ನು ಪುನರ್ ವಿಂಗಡನೆ ರಚನೆ ಮಾಡಿದಾಗ ನವ ಮೈಸೂರು ರಾಜ್ಯಕ್ಕೆ ಸೇರ್ಪಡೆಗೊಂಡು 1962 ರವರೆಗೆ ಸದರಿ 04 ಜಿಲ್ಲೆಗಳಲ್ಲಿ ಮಾತ್ರ ಕಾರ್ಯ ನಿರ್ವಹಿಸುತ್ತಿತ್ತು. 1962 ರಲ್ಲಿ ಕರ್ನಾಟಕ ಗೃಹರಕ್ಷಕ ಕಾಯಿದೆಯನ್ನು ರೂಪಿಸಿ, ರಾಜ್ಯದ ಎಲ್ಲಾ ಜಿಲ್ಲೆಗಳಿಗೆ ವಿಸ್ತರಿಸಲಾಯಿತು. ಪ್ರಥಮ ಮಹಾ ಸಮಾದೇಷ್ಟರಾಗಿ 1960 ರ ಏಪ್ರಿಲ್ ನಲ್ಲಿ ಕಾರ್ಯಭಾರ ವಹಿಸಿಕೊಂಡ ಶ್ರೀ ಆರ್.ಎ.ಮುಂಡ್ಕೂರ್, ಐಪಿಎಸ್., ರವರು ಗೃಹರಕ್ಷಕ ದಳದ ರಚನೆಯ ಭದ್ರ ಬುನಾದಿಗೆ ಅಡಿಪಾಯ ಹಾಕಿದರು.

ಸ್ವಯಂ ಇಚ್ಛೆಯಿಂದ, ಕನಿಷ್ಠ 20 ವರ್ಷ ಮೇಲ್ಪಟ್ಟ 50 ವರ್ಷದೊಳಗಿನ, 4ನೇ ತರಗತಿ ಪಾಸಾದ ನಾಗರಿಕರು ಸಂಸ್ಥೆಯ ಸದಸ್ಯರಾಗಬಹುದಾಗಿರುತ್ತದೆ. ಗೃಹರಕ್ಷಕ ಕಾಯ್ದೆ ಹಾಗೂ ನಿಯಮಗಳ ಅಡಿಯಲ್ಲಿ ತುರ್ತು ಸಂದರ್ಭಗಳಲ್ಲಿ ಸಮಾಜದ ಶಾಂತಿ, ಸುವ್ಯವಸ್ಥೆ, ಸಮುದಾಯದ ರಕ್ಷಣೆ ಮತ್ತು ಆಸ್ತಿ ರಕ್ಷಣೆ ಕಾರ್ಯ ಸಲ್ಲಿಸಬಯಸುವ ಕಾರ್ಯಕ್ಕೆ ಎಲ್ಲಾ ವರ್ಗಗಳ ಸಾರ್ವಜನಿಕರಿಗೂ ಮುಕ್ತ ಅವಕಾಶವಿರುತ್ತದೆ. ನೋಂದಣಿಯಾದ ಎಲ್ಲಾ ಸದಸ್ಯರಿಗೂ ಮೂಲ ತರಬೇತಿಯನ್ನು ಜಿಲ್ಲಾ ಮಟ್ಟದಲ್ಲಿ ನೀಡಲಾಗುವುದು. ಗೃಹರಕ್ಷಕ ಮತ್ತು ಪೌರರಕ್ಷಣಾ ಅಕಾಡೆಮಿ, ಬೆಂಗಳೂರು ಇಲ್ಲಿ ಆಯ್ಕೆಮಾಡಿದ ಗೃಹರಕ್ಷಕರಿಗೆ ಪ್ರಗತಿಪರ ತರಬೇತಿಯನ್ನು ನೀಡಲಾಗುತ್ತಿದೆ. ಅವರಿಗೆ ನೀಡಲಾಗುವ ತರಬೇತಿಯು ಅವರನ್ನು ಸಮುದಾಯದ ಸೇವೆಯನ್ನು ಸಮರ್ಥವಾಗಿ ತುರ್ತು ಪರಿಸ್ಥಿತಿಗಳಲ್ಲಿ ಮತ್ತು ಕಾನೂನು ಮತ್ತು ಶಿಸ್ತುಪಾಲನಾ ಸಂದರ್ಭಗಳಲ್ಲಿ ಕ್ರಿಯಾಶೀಲರಾಗಿ ನಿರ್ವಹಿಸುವಂತೆ ತಯಾರುಮಾಡಲಾಗುತ್ತದೆ. ಹಬ್ಬ, ಜಾತ್ರೆ, ಉತ್ಸವ, ಚುನಾವಣೆ ಇತ್ಯಾದಿ ಸಂದರ್ಭಗಳಲ್ಲಿ ಗೃಹರಕ್ಷಕರ ಸೇವೆಯು ಅನಿವಾರ್ಯವಾಗಿರುತ್ತದೆ.

ತಮ್ಮದೇ ಆದ ವೃತ್ತಿಗಳಲ್ಲಿರುವ, ಉತ್ಸಾಹಿ ಮಹಿಳೆಯರನ್ನು ಮತ್ತು ಪುರುಷರನ್ನು ಈ ಸಂಸ್ಥೆಯು ಒಳಗೊಂಡಿರುತ್ತದೆ. ಗೃಹರಕ್ಷಕ ಕಾಯಿದೆಯಲ್ಲಿ ವಿವರಿಸಿರುವ ಕರ್ತವ್ಯ ಮತ್ತು ಹೊಣೆಗಾರಿಕೆಯನ್ನು ಸಮರ್ಥವಾಗಿ ನಿರ್ವಹಿಸುವ ಮಟ್ಟದಲ್ಲಿ ಅವರನ್ನು ಸಜ್ಜುಗೊಳಿಸಿ ಜನ ಸಮುದಾಯದ ಸೇವೆಗಳಿಗಾಗಿ ಪ್ರಾಧಿಕಾರಗಳಿಗೆ ತುರ್ತು ಸಂದರ್ಭಗಳಲ್ಲಿ ಸಾರ್ವಜನಿಕರ ಜೀವ, ಆಸ್ತಿ-ಪಾಸ್ತಿ ರಕ್ಷಿಸುವುದಕ್ಕೆ ಮತ್ತು ಸಮಾಜದಲ್ಲಿ ಕಾನೂನು ನಿಯಂತ್ರಣ ಕರ್ತವ್ಯಗಳಿಗೆ ನಿಯೋಜಿಸಲಾಗುವುದು. ಆಡಳಿತ, ಮಾರ್ಗದರ್ಶನ ಮತ್ತು ತರಬೇತಿ ನೀಡಲು ಅತ್ಯಲ್ಪ ಸಂಖ್ಯೆಯ ಸಿಬ್ಬಂದಿಯನ್ನು ಈ ಇಲಾಖೆಗೆ ಮಂಜೂರು ಮಾಡಲಾಗಿದೆ.

ಈ ಇಲಾಖೆಯ ಆಡಳಿತ ಹಾಗೂ ನಿಯಂತ್ರಣದ ಅಧಿಕಾರವು ಆರಕ್ಷಕ ಮಹಾ ನಿರ್ದೇಶಕರು ಮತ್ತು ಮಹಾ ಸಮಾದೇಷ್ಟರು, ಗೃಹರಕ್ಷಕದಳ ಹಾಗೂ ನಿರ್ದೇಶಕರು, ಪೌರರಕ್ಷಣೆ ಇವರ ಅಧೀನದಲ್ಲಿರುತ್ತದೆ. ಇವರಿಗೆ (1) ಆರಕ್ಷಕ ಮಹಾ ನಿರೀಕ್ಷಕರು ಹಾಗೂ ಅಪರ ಮಹಾ ಸಮಾದೇಷ್ಟರು, ಗೃಹರಕ್ಷಕದಳ ಮತ್ತು ಪದನಿಮಿತ್ತ ಅಪರ ನಿರ್ದೇಶಕರು, ಪೌರರಕ್ಷಣೆ (2) ಉಪ ಮಹಾ ಸಮಾದೇಷ್ಟರು, ಗೃಹರಕ್ಷಕದಳ ಹಾಗೂ ಉಪ ನಿರ್ದೇಶಕರು, ಪೌರರಕ್ಷಣೆ (3) ಆಡಳಿತಾಧಿಕಾರಿಗಳು, ಗೃಹರಕ್ಷಕ ದಳ ಮತ್ತು ಪೌರರಕ್ಷಣಾ, ಕೇಂದ್ರ ಕಚೇರಿ (4) ಲೆಕ್ಕಾಧಿಕಾರಿಗಳು ಹಾಗೂ ಸಮಾದೇಷ್ಟರು ಗೃಹರಕ್ಷಕ ಮತ್ತು ಪೌರರಕ್ಷಣಾ ಅಕಾಡೆಮಿ ಮತ್ತು ಸಹಾಯಕ ಆಡಳಿತಾಧಿಕಾರಿಗಳು ಇವರು ಸಹಾಯಕರಾಗಿರುತ್ತಾರೆ.

ಪ್ರಸಕ್ತ ಕರ್ನಾಟಕ ರಾಜ್ಯ ಗೃಹರಕ್ಷಕ ದಳವು ದೇಶದಲ್ಲೇ ಒಂದು ಅತ್ಯುತ್ತಮ ಸಂಸ್ಥೆಯೆಂದು ಪರಿಗಣಿಸಲ್ಪಟ್ಟಿದೆ.

ಗೃಹರಕ್ಷಕ ದಳದ ಮುಖ್ಯ ಧ್ಯೇಯ **"ನಿಷ್ಕಾಮ ಸೇವೆ"**.

**ಸಂಖ್ಯಾಬಲ :-**

ಪ್ರಸ್ತುತ, ಗೃಹರಕ್ಷಕದಳವು ಎಲ್ಲಾ 31 ಜಿಲ್ಲಾ ಕೇಂದ್ರ ಸ್ಥಾನಗಳಲ್ಲಿ ಕಾರ್ಯ ನಿರ್ವಹಿಸುತ್ತಿದೆ. ಬೆಂಗಳೂರು ಮಹಾ ನಗರದ ಜನ ಸಾಂದ್ರತೆ ಹಾಗೂ ಕಾರ್ಯ ಚಟುವಟಿಕೆಗಳ ಅನುಸಾರ ಬೆಂಗಳೂರು ಜಿಲ್ಲಾ ಗೃಹರಕ್ಷಕದಳವನ್ನು ಬೆಂಗಳೂರು ಉತ್ತರ, ಬೆಂಗಳೂರು ದಕ್ಷಿಣ ಹಾಗೂ ಬೆಂಗಳೂರು ಗ್ರಾಮಾಂತರ ಎಂದು 03 ಜಿಲ್ಲೆಗಳನ್ನಾಗಿ ವಿಂಗಡಿಸಲಾಗಿದೆ. ರಾಜ್ಯದಲ್ಲಿ ಒಟ್ಟಾರೆ 419 ಗೃಹರಕ್ಷಕ ಘಟಕಗಳು ವಿವಿಧ ಸ್ಥಳಗಳಲ್ಲಿ ಕ್ರಿಯಾಶೀಲವಾಗಿವೆ. ಭಾರತ ಸರ್ಕಾರವು ರಾಜ್ಯಕ್ಕೆ ಮಂಜೂರು ಮಾಡಿರುವ ಗೃಹರಕ್ಷಕರ ಸಂಖ್ಯೆ 21,700. ಈ ಸಂಸ್ಥೆಯ ಪ್ರಾಮುಖ್ಯತೆಯನ್ನು ಪರಿಗಣಿಸಿದ ರಾಜ್ಯ ಸರ್ಕಾರವು ಆದೇಶ ಸಂಖ್ಯೆ: ಒಇ 29 ಕಗ್ರಸೇ 2014 ದಿನಾಂಕ: 09-03-2016 ರಲ್ಲಿ ರಾಜ್ಯದ ಗೃಹರಕ್ಷಕರನ್ನು ಸಂಖ್ಯಾಬಲವನ್ನು 30000 ಕ್ಕೆ ಹೆಚ್ಚಿಸಿರುತ್ತದೆ, ಪ್ರಸ್ತುತ **4519** ಮಹಿಳಾ ಗೃಹರಕ್ಷಕರು ಒಳಗೊಂಡಂತೆ ಒಟ್ಟು **26005** ಗೃಹರಕ್ಷಕರು ಹಾಜರಿ ಪಟ್ಟಿಯಲ್ಲಿರುತ್ತಾರೆ.

**ತರಬೇತಿ:**

ಗೃಹರಕ್ಷಕ ಮತ್ತು ಪೌರರಕ್ಷಣಾ ಅಕಾಡೆಮಿ ಎಂಬ ನಾಮಧೇಯದೊಂದಿಗೆ ನಂ. 1, ಅಣ್ಣಾಸ್ವಾಮಿ ಮೊದಲಿಯಾರ್ ರಸ್ತೆ, ಹಲಸೂರು ಕೆರೆಯ ಪಶ್ಚಿಮ ದಂಡೆ, ಬೆಂಗಳೂರು – 560 042 ಇಲ್ಲಿ ಸುಸಜ್ಜಿತವಾದ ತರಬೇತಿ ಸಂಸ್ಥೆಯನ್ನು ಸ್ಥಾಪಿಸಲಾಗಿದೆ. ಈ ಇಲಾಖೆಗೆ ಹೊಸದಾಗಿ ನೇಮಕಗೊಂಡ ಸಿಬ್ಬಂದಿಗಳಗಲ್ಲದೆ, ಇತರೆ ಸರ್ಕಾರಿ ಸಂಸ್ಥೆಗಳ ಸಿಬ್ಬಂದಿಗಳಿಗೂ ಇಲ್ಲಿ ಪ್ರಥಮ ಚಿಕಿತ್ಸೆ, ಅಗ್ನಿಶಮನಗಳ ಕುರಿತು ತರಬೇತಿ ನೀಡಲಾಗುತ್ತದೆ. ರಾಜ್ಯದ ಎಲ್ಲಾ ಜಿಲ್ಲೆಗಳಿಂದ ಬರುವ ಗೃಹರಕ್ಷಕರಿಗೆ ಪ್ರಗತಿಪರ ತರಬೇತಿ ಮತ್ತು ಇತರೆ ರಾಜ್ಯಗಳ ಗೃಹರಕ್ಷಕರಿಗೆ ಮತ್ತು ಸಿಬ್ಬಂದಿಗೆ ವಾಟರ್‌ಮನ್‌ಶಿಪ್ ತರಬೇತಿ ನೀಡಲಾಗುತ್ತದೆ. ಕನಿಷ್ಠ ತಲಾ 50 ಜನ ಶಿಕ್ಷಣಾರ್ಥಿಗಳಿಗೆ ತರಬೇತಿ ನೀಡಲು ಮತ್ತು ವಸತಿ ಸೌಕರ್ಯದ ಅವಕಾಶ ಕಲ್ಪಿಸಲಾಗಿದೆ.

**ಇಲಾಖೆಯ ಚಟುವಟಿಕೆಗಳ ಕಾರ್ಯವಿಧಾನ :**

ಗೃಹರಕ್ಷಕ ಇಲಾಖೆಯು ಕರ್ನಾಟಕ ಸರ್ಕಾರದ ಗೃಹ ಖಾತೆಯ ಅಡಿಯಲ್ಲಿ ಕಾರ್ಯ ನಿರ್ವಹಿಸುತ್ತಿದೆ. ಅದರ ಕಾರ್ಯಚಟುವಟಿಕೆಗಳನ್ನು ಕೆಳಕಾಣಿಸಿರುವ ಹಂತಗಳಲ್ಲಿ ಅನುಷ್ಠಾನಗೊಳಸಲಾಗುತ್ತಿದೆ.

ರಾಜ್ಯಮಟ್ಟದ ಕೇಂದ್ರಕಾರ್ಯಸ್ಥಾನದಿಂದ ಡಿಜಿಪಿ ಮತ್ತು ಮಹಾ ಸಮಾದೇಷ್ಟರು, ಗೃಹರಕ್ಷಕದಳ ಇವರಿಂದ ಇಲಾಖೆಯು ನಿಯಂತ್ರಿಸಲ್ಪಡುತ್ತಿದೆ. ಇವರು ಗೃಹರಕ್ಷಕ ಕಾಯಿದೆಯಲ್ಲಿ ಮತ್ತು ಅದರ ಅಡಿಯಲ್ಲಿ ರೂಪಿತವಾಗಿರುವ ಗೃಹರಕ್ಷಕ ನಿಯಮಾವಳಿಗಳು ಮತ್ತು ಗೃಹರಕ್ಷಕ ಕೈಪಿಡಿಯಲ್ಲಿ ವಿವರಿಸಿರುವ ಉದ್ದೇಶಗಳನ್ನು ಅನುಷ್ಠಾನಗೊಳಿಸುತ್ತಾರೆ.

ಜಿಲ್ಲಾ ಮಟ್ಟದಲ್ಲಿ ಗೌರವ ಜಿಲ್ಲಾ ಸಮಾದೇಷ್ಟರು, ನಿಯಂತ್ರಣಾಧಿಕಾರಿಗಳ ಆದೇಶಗಳನ್ನು ಅನುಷ್ಠಾನಗೊಳಸುತ್ತಾರೆ. ಇವರಿಗೆ ಹೋಬಳಿ, ತಾಲ್ಲೂಕು ಹಾಗೂ ನಗರ ಮಟ್ಟದಲ್ಲಿ ಗೌರವ ಘಟಕಾಧಿಕಾರಿಗಳು ಸಮಾದೇಷ್ಟರಿಗೆ ಸಹಾಯಕರಾಗಿರುತ್ತಾರೆ.

ಬೆಂಗಳೂರಿನಲ್ಲಿರುವ ಗೃಹರಕ್ಷಕದಳ ಹಾಗೂ ಪೌರರಕ್ಷಣಾ ದಳದ ತರಬೇತಿ ಅಕಾಡೆಮಿಯ ಕಾರ್ಯಭಾರವನ್ನು ವಹಿಸಿಕೊಂಡಿರುವ ಸಮಾದೇಷ್ಟರು, ಅವರಿಗೆ ಸಹಾಯಕರಾಗಿರುವ ಉಪ ಸಮಾದೇಷ್ಟರುಗಳು ಹಾಗೂ ಬೋಧಕ ಸಿಬ್ಬಂದಿಯವರು ಪ್ರಗತಿಪರ ತರಬೇತಿ ಕಾರ್ಯಕ್ರಮಗಳನ್ನು ಆಯೋಜಿಸಲಾಗುವುದಲ್ಲದೆ, ಎಲ್ಲಾ ಜಿಲ್ಲಾ ಮಟ್ಟದ ತರಬೇತಿ ಕಾರ್ಯಕ್ರಮಗಳನ್ನು ರೂಪಿಸುವ ಕಾರ್ಯವನ್ನೂ ಸಹ ನಿರ್ವಹಿಸುತ್ತಿರುತ್ತಾರೆ.

**ಇಲಾಖೆಯ ಧ್ಯೇಯ ಮತ್ತು ಉದ್ದೇಶಗಳು:**


1) ಕಾನೂನು ಮತ್ತು ಶಿಸ್ತು ಪಾಲನೆ ಸಂದರ್ಭಗಳಲ್ಲಿ ಪೋಲೀಸ್ ಇಲಾಖೆಗೆ ಸಹಾಯಕ ಪಡೆಯಾಗಿ ಕಾರ್ಯನಿರ್ವಹಿಸುವುದು.
2) ಅತ್ಯಾವಶ್ಯಕ ಸೇವೆಗಳ ಪಾಲನೆ.
3) ಪ್ರಾಕೃತಿಕ ಮತ್ತು ಮಾನವ ನಿರ್ಮಿತ ವಿಕೋಪಗಳ ಸಂದರ್ಭಗಳಲ್ಲಿ ರಕ್ಷಣೆ ಮತ್ತು ಪರಿಹಾರ ಕಾರ್ಯ.
4) ಸೂಕ್ಷ್ಮ ಸ್ಥಾವರಗಳಿಗೆ ಭದ್ರತೆ ಒದಗಿಸುವುದು.

**2030 – ನಮ್ಮ ದೃಷ್ಟಿ**

ಪ್ರವಾಹಕ್ಕೆ ತುತ್ತಾಗಲಿರುವ ಹಾಗೂ ಎಲ್ಲಾ ಪ್ರಮುಖ ಪ್ರದೇಶಗಳಲ್ಲಿ ಪ್ರಾದೇಶಿಕ ತರಬೇತಿ ಕೇಂದ್ರಗಳನ್ನು ಹೊಂದುವುದು. ಎಲ್ಲಾ ಜಿಲ್ಲಾ ಕೇಂದ್ರಗಳಲ್ಲಿ ಜಿಲ್ಲಾ ತರಬೇತಿ ಕೇಂದ್ರಗಳನ್ನು ಮತ್ತು ಪ್ರತಿಯೊಂದು ತಾಲ್ಲೂಕು ಕೇಂದ್ರಗಳಲ್ಲಿ ಸ್ವಂತ ಕಟ್ಟಡಗಳನ್ನು ಹೊಂದಿ ಅಲ್ಲಿ ಕರ್ತವ್ಯ/ ತರಬೇತಿಗಳಿಗೆ ಆಗಮಿಸುವ ಗೃಹರಕ್ಷಕರಿಗೆ ತಂಗಲು ವಸತಿ ಸೌಕರ್ಯವನ್ನು, ಹಾಜರಿಯಲ್ಲಿರುವ ಕನಿಷ್ಠ 25% ಪ್ರತಿಶತ ಗೃಹರಕ್ಷಕರಿಗೆ ಪ್ರಗತಿಪರ ತರಬೇತಿ ನೀಡುವ ಗುರಿಯನ್ನು ಇಲಾಖೆಯು ಹೊಂದಿದೆ.

ಪ್ರಸ್ತುತ, ರಾಜ್ಯದ ನಿಗದಿತ ಸಂಖ್ಯಾಬಲವು 30,000 ಆಗಿದ್ದು, 2030ರ ವರೆಗೆ ಸದರಿ ಸಂಖ್ಯಾಬಲವನ್ನು ಕೇಂದ್ರ ಸರ್ಕಾರದೊಂದಿಗೆ ಸಮಾಲೋಚಿಸಿ, ಹಂತ ಹಂತವಾಗಿ ಒಟ್ಟು 50,000 ಕ್ಕೆ ಏರಿಸುವ ಆಶಯ ಹೊಂದಲಾಗಿದೆ. ಈ ಸಂದರ್ಭಕ್ಕೆ ಹೊಂದಿಕೊಳ್ಳುವಂತೆ ಮೂಲಭೂತ ಸೌಕರ್ಯಗಳನ್ನು ಹೊಂದಲು ಕ್ರಮ ಕೈಗೊಳ್ಳುವಿಕೆ.

## ಗೃಹರಕ್ಷಕ ರಚನೆ ಪಟ್ಟಿ



**ಕಳೆದ ಎರಡು ವರ್ಷಗಳಲ್ಲಿ ಇಲಾಖೆಯಲ್ಲಿ ನಡೆದ ಚಟುವಟಿಕೆಗಳು ಮತ್ತು ಸಾಧನೆಗಳು :**

1) **ಹೊಸ ಘಟಕಗಳ ಪ್ರಾರಂಭ** – 2017-18 ರಲ್ಲಿ 07 ಹೊಸ ಘಟಕಗಳನ್ನು ಪ್ರಾರಂಭಿಸಲಾಗಿದೆ, 2018-19 ನೇ ಸಾಲಿನಲ್ಲಿ ಬೆಂಗಳೂರು ಉತ್ತರ ಜಿಲ್ಲೆಯಲ್ಲಿ 01 ಘಟಕ, ಬೆಂಗಳೂರು ದಕ್ಷಿಣ ಜಿಲ್ಲೆಯಲ್ಲಿ 01 ಘಟಕ ಹಾಗೂ ಧಾರವಾಡ 01 ಘಟಕ ಒಟ್ಟು 03 ಹೊಸ ಘಟಕಗಳನ್ನು ತೆರೆಯಲಾಗಿದೆ.

2) **ಗೃಹರಕ್ಷಕರ ನೋಂದಣಿ** –2017-18ನೇ ಸಾಲಿನಲ್ಲಿ **599** ಮಹಿಳಾ ಅಭ್ಯರ್ಥಿಗಳನ್ನು ಒಳಗೊಂಡು ಒಟ್ಟು **1827** ಗೃಹರಕ್ಷಕರನ್ನು ಮತ್ತು 2018-19 ನೇ ಸಾಲಿನಲ್ಲಿ **388** ಮಹಿಳೆಯರನ್ನು ಒಳಗೊಂಡಂತೆ ಒಟ್ಟು **2964** ಅಭ್ಯರ್ಥಿಗಳನ್ನು ಗೃಹರಕ್ಷಕರನ್ನಾಗಿ ನೊಂದಾಯಿಸಿಕೊಳ್ಳಲಾಗಿದೆ.

3) **ಗೃಹರಕ್ಷಕರ ನಿಯೋಜನೆ** – 2017-18ನೇ ಸಾಲಿನಲ್ಲಿ **34,53,361** ಮಾನವದಿನಗಳಷ್ಟು ಗೃಹರಕ್ಷಕರನ್ನು ನಿಯೋಜಿಸಲಾಗಿದ್ದು, 2018-19 ನೇ ಸಾಲಿನಲ್ಲಿ ಬಂದೋಬಸ್ತ್ ಮತ್ತು ಇತರೆ ಕರ್ತವ್ಯಗಳಿಗೆ **45,44,700** ಮಾನವ ದಿನಗಳಷ್ಟು ಗೃಹರಕ್ಷಕರನ್ನು ಪೊಲೀಸ್, ಸಾರಿಗೆ, ಅಗ್ನಿಶಾಮಕ ಮತ್ತು ತುರ್ತು ಸೇವೆಗಳು, ಅಬಕಾರಿ, ಕಾರಾಗೃಹ, ಗಣಿ ಮತ್ತು ಭೂವಿಜ್ಞಾನ, ಧಾರ್ಮಿಕ ದತ್ತಿ, ಪ್ರಸಾರ ಭಾರತಿ, ವಿಶ್ವ ವಿದ್ಯಾಲಯಗಳು, ಸರ್ಕಾರಿ ಆಸ್ಪತ್ರೆಗಳು, ಬಿಬಿಎಂಪಿ, ಸಂಚಾರ ನಿಯಂತ್ರಣ, ಬೆಂಗಳೂರು ನಗರದ ಮೆಟ್ರೊ ರೈಲ್ವೆ ನಿಲ್ದಾಣಗಳಿಗೆ, ಪ್ರವಾಸೋದ್ಯಮ ಇಲಾಖೆ, ಎನ್.ಸಿ.ಸಿ ಕೆ.ಎಸ್.ಆರ್.ಟಿ.ಸಿ, ಡಿಪಿಎಆರ್,ಯುವ ಸಬಲೀಕರಣ,ಕೆಪಿಟಿಸಿಎಲ್, ಮಂಡ್ಯ ಸಕ್ಕರೆ ಕಾರ್ಖಾನೆ ಮುಂತಾದವುಗಳಿಗೆ ಒದಗಿಸಲಾಗಿದೆ.

4) 2018-19 ನೇ ಸಾಲಿನಲ್ಲಿ **55835** ಗೃಹರಕ್ಷಕರನ್ನು ಪೂರ್ಣ ಪ್ರಮಾಣದಲ್ಲಿ ಬಂದೋಬಸ್ತ್ ಕರ್ತವ್ಯಕ್ಕೆ ನಿಯೋಜಿಸಲಾಗಿದೆ.

   ಬೆಂಗಳೂರು ನಗರ ವ್ಯಾಪ್ತಿಯಲ್ಲಿ **800** ಜನ ಗೃಹರಕ್ಷಕರನ್ನು ಸಂಚಾರ ನಿಯಂತ್ರಣ ಕರ್ತವ್ಯಕ್ಕೆ ನಿಯೋಜಿಸಲು ಮಂಜೂರಾತಿ ನೀಡಲಾಗಿದೆ. ಅದೇ ರೀತಿ ಕಾನೂನು ಸುವ್ಯವಸ್ಥೆ, ಪೊಲೀಸ್ ಇಲಾಖೆಗೆ ಬೆಂಗಳೂರು ನಗರವನ್ನೊಳಗೊಂಡಂತೆ ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿ ಸುಮಾರು **6453** ಜನ ಗೃಹರಕ್ಷಕರನ್ನು ಕರ್ತವ್ಯಕ್ಕೆ ನಿಯೋಜಿಸಲು ಮಂಜೂರಾತಿ ನೀಡಲಾಗಿದೆ.

5) **ಕಟ್ಟಡಗಳ ನಿರ್ಮಾಣ** :- ದಾವಣಗೆರೆ ಜಿಲ್ಲಾ ಗೃಹರಕ್ಷಕ ಹಾಗೂ ಪೌರರಕ್ಷಣಾ ಪ್ರಾದೇಶಿಕ ತರಬೇತಿ ಕೇಂದ್ರ ಕಟ್ಟಡದ 3ನೇ ಹಂತದ ನಿರ್ಮಾಣವು ಮುಕ್ತಾಯವಾಗಿರುತ್ತದೆ. 2018-19 ನೇ ಸಾಲಿನಲ್ಲಿ ರೂ.77.50 ಲಕ್ಷಗಳು ಹಂಚಿಕೆಯಾಗಿ ನಿರ್ಮಾಣ ಕಾರ್ಯ ಪ್ರಾರಂಭವಾಗಿರುತ್ತದೆ. ಇದೇ ಸಾಲಿನಲ್ಲಿ ರಾಯಚೂರು ಜಿಲ್ಲಾ ಗೃಹರಕ್ಷಕ ತರಬೇತಿ ಕೇಂದ್ರ ಕಟ್ಟಡಕ್ಕೆ ಸರ್ಕಾರದಿಂದ ರೂ.100.00 ಲಕ್ಷಗಳು ಹಂಚಿಕೆಯಾಗಿ ನಿರ್ಮಾಣ ಕಾರ್ಯವು ಮುಕ್ತಾಯಗೊಂಡಿದೆ.

6) **<u>2018-19ನೇ ಸಾಲಿನಲ್ಲಿ ಗೃಹರಕ್ಷಕ ಹಾಗೂ ಪೌರರಕ್ಷಣಾ ಸ್ವಯಂ ಸೇವಕರು ಮತ್ತು ಸಿಬ್ಬಂದಿಯವರಿಗೆ ನೀಡಲಾದ ವಿವಿಧ ತರಬೇತಿಗಳ ಮಾಹಿತಿ.</u>**

**I.** **ಗೃಹರಕ್ಷಕ ಹಾಗೂ ಪೌರರಕ್ಷಣಾ ಅಕಾಡೆಮಿ, ಬೆಂಗಳೂರು ಇಲ್ಲಿ 303** ಗೃಹರಕ್ಷಕ ಹಾಗೂ ಪೌರರಕ್ಷಣಾ ದಳದ ಸ್ವಯಂ ಸೇವಕರಿಗೆ ಪ್ರಗತಿ ಪರ ತರಬೇತಿ, ಪ್ರವಾಹ ರಕ್ಷಣೆ, ಅಗ್ನಿಶಮನ, ಪ್ರಥಮ ಚಿಕಿತ್ಸೆ ಹಾಗೂ ಇನ್ನಿತರೆ ವಿಷಯಗಳ ಬಗ್ಗೆ ತರಬೇತಿಗಳನ್ನು ನೀಡಲಾಗಿದೆ.

**II.** 325 ಕೆಪಿಟಿಸಿಎಲ್ ಸಿಬ್ಬಂದಿಗೆ ಮೂಲ ಪ್ರಥಮ ಚಿಕಿತ್ಸೆ ಮತ್ತು ಅಗ್ನಿಶಮನ ತರಬೇತಿಗಳನ್ನು ನೀಡಲಾಗಿದೆ.

**III.** 40 ಜನ ಪ್ರೊಬೇಷನರಿ ಆರ್.ಎಸ್.ಐ ಹಾಗೂ 31 ಮಹಿಳಾ ರಿಸರ್ವ್ ಪೊಲೀಸ್ ಕಾನ್ಸ್‌ಟೇಬಲ್ ಗಳಿಗೆ ವಿಶೇಷ ಪ್ರಾಯೋಗಿಕ ತರಬೇತಿ ನೀಡಲಾಗಿದೆ.

**IV.** 2018ನೇ ಸಾಲಿನಲ್ಲಿ ಭಾರತ ದೇಶದ ವಿವಿಧ ರಾಜ್ಯಗಳಿಂದಲೂ ಒಟ್ಟು 70 ಗೃಹರಕ್ಷಕರು ಮತ್ತು ಪೌರರಕ್ಷಣಾ ಅಧಿಕಾರಿಗಳು ಅಖಿಲ ಭಾರತ ಪ್ರವಾಹ ರಕ್ಷಣಾ ತರಬೇತಿಯನ್ನು ಆಯೋಜಿಸಲಾಯಿತು.

**V.** ಆಪದ ಮಿತ್ರ- ಬೆಳಗಾವಿ ಜಿಲ್ಲೆಯ 200 ಗೃಹರಕ್ಷಕರು ಪ್ರವಾಹ ರಕ್ಷಣೆ (Community Volunteers) ವಿಶೇಷ ತರಬೇತಿಯಲ್ಲಿ ಪಾಲ್ಗೊಂಡಿರುತ್ತಾರೆ.

**VI.** 2018ನೇ ಸಾಲಿನಲ್ಲಿ ಪೌರರಕ್ಷಣಾ ಸ್ವಯಂ ಸೇವಕರು 326 ಜನ ರಾಜ್ಯ ಮತ್ತು ಸ್ಥಳಿಯ ಮಟ್ಟದಲ್ಲಿ ವಿವಿಧ ತರಬೇತಿಗಳನ್ನು ಗೃಹರಕ್ಷಕ ಮತ್ತು ಪೌರರಕ್ಷಣಾ ಅಕಾಡೆಮಿ ಬೆಂಗಳೂರುನಲ್ಲಿ ಪಡೆದಿರುತ್ತಾರೆ.



1) **ಕಲ್ಯಾಣ ಕಾರ್ಯಕ್ರಮಗಳು –**

1) ಕರ್ತವ್ಯದಲ್ಲಿ ನಿರತರಾಗಿದ್ದಾಗ 08 ಗೃಹರಕ್ಷಕರಿಗೆ ಸರ್ಕಾರದ ನಿಧಿಯಿಂದ ರೂ.26,28,000/- ಮರಣ ಹೊಂದಿದ ಹಾಗೂ ಗಾಯಗೊಂಡಿರುವ ಕುಟುಂಬಕ್ಕೆ ಸಹಾಯ ಧನವನ್ನಾಗಿ 2018 ನೇ ಸಾಲಿನಲ್ಲಿ ಸಂದಾಯ ಮಾಡಲಾಗಿದೆ.

| ಕ್ರ. ಸ | ಹೆಸರು | ಜಿಲ್ಲಾ | ಮರಣ ಹೊಂದಿದ ಹಾಗೂ ಗಾಯಗೊಂಡಿರುವ | ಮೊತ್ತ |
|---|---|---|---|---|
| 1 | ದಿ||. ಮಲ್ಲಪ್ಪ ಬಸಪ್ಪ ಶೀಲವಂತ | ಬೆಳಗಾವಿ | ಪರಿಹಾರ ಧನ | 1,00,000/- |
| 2. | ಹೆಚ್. ಆರ್. ಮಂಜುನಾಥ್ | ಹಾಸನ | ಪರಿಹಾರ ಧನ | 5,00,000/- |
| 3. | ದಿ|| ವೇಣುಗೋಪಾಲ್ | ಬೆಂಗಳೂರು ಉತ್ತರ | ಪರಿಹಾರ ಧನ | 5,00,000/- |
| 4. | ದಿ|| ಮಹೇಂದ್ರ ಎಂ.ಕೆ | ಕಲಬುರ್ಗಿ | ಪರಿಹಾರ ಧನ | 5,00,000/- |
| 5. | ದಿ|| ಎನ್.ಎಂ. ಬಸವರಾಜು | ಬೆಂಗಳೂರು ದಕ್ಷಿಣ | ಪರಿಹಾರ ಧನ | 5,00,000/- |
| 6. | ದಿ|| ಚೇತನ್ ರುಡಿಗ್ರಾಸ್ | ಶಿವಮೊಗ್ಗ | ಪರಿಹಾರ ಧನ | 5,00,000/- |
| 7. | ನರಸಿಂಹರಾಜು | ರಾಮನಗರ | ಅಪಘಾತ ಧನ | 7,000/- |
| 8. | ಪಿ.ಎ. ಕಲಮ್ | ಬಾಗಲಕೋಟೆ | ಅಪಘಾತ ಧನ | 21,000/- |

2) 2018-19 ನೇ ಸಾಲಿನಲ್ಲಿ 32 ಮೃತ ಗೃಹರಕ್ಷಕರ ಕುಟುಂಬಗಳಿಗೆ ರೂ.2,33,000/- ಗಳನ್ನು ಗೃಹರಕ್ಷಕರ ನಿಧಿಯಿಂದ ಮಂಜೂರು ಮಾಡಲಾಗಿದೆ.

3) ಗೃಹರಕ್ಷಕ ನಿಧಿಯಿಂದ 15 ಜನ ಗೃಹರಕ್ಷಕ ಸದಸ್ಯರ ಮಕ್ಕಳಿಗೆ ಉನ್ನತ/ತಾಂತ್ರಿಕ ವಿದ್ಯಾಭ್ಯಾಸಕ್ಕಾಗಿ ಒಟ್ಟು ರೂ.73,126/- ಮತ್ತು 26 ಜನ ಗೃಹರಕ್ಷಕ ಸದಸ್ಯರ ಮಕ್ಕಳಿಗೆ ಪದವಿ ವ್ಯಾಸಂಗಕ್ಕಾಗಿ ಒಟ್ಟು ರೂ.2,81,190/- ಗಳನ್ನು ಮಂಜೂರು ಮಾಡಲಾಯಿತು.

4) ವೈದ್ಯಕೀಯ ಚಿಕಿತ್ಸೆಗಾಗಿ 31 ಜನ ಗೃಹರಕ್ಷಕ ಸದಸ್ಯರು/ಅವರ ಕುಟುಂಬಗಳಿಗೆ ರೂ.2,85,138/- ಗಳನ್ನು ಮಂಜೂರು ಮಾಡಲಾಯಿತು.

**ಮಾನವ ಸಂಪನ್ಮೂಲ ನಿರ್ವಹಣೆ ಮತ್ತು ಆಡಳಿತಾತ್ಮಕ ಚಟುವಟಿಕೆಗಳಲ್ಲಿ ಸಾಧನೆಗಳು;**

**ಗುಂಪುವಾರು ಮಂಜೂರಾಗಿರುವ ಹುದ್ದೆಗಳು/ಮಹಿಳಾ, ಪುರುಷ-ಅಧಿಕಾರಿ ಸಿಬ್ಬಂದಿಗಳ ಒಟ್ಟು ಸಂಖ್ಯೆ** ಇಲಾಖೆಯಲ್ಲಿರುವ ನೌಕರರ ಸಂಖ್ಯೆ, ಪುರುಷರು, ಮಹಿಳೆಯರು, ಅಂಕಿ ಅಂಶಗಳು ಕೆಳಕಾಣಿಸಿರುವಂತಿದೆ.

| ವರ್ಗಾವಾರು ಹುದ್ದೆ | ವರದಿಯ ಸಾಲಿನಲ್ಲಿ ಮಂಜೂರಾಗಿದ್ದ ಹುದ್ದೆಗಳ ಸಂಖ್ಯೆ | ವಾಸ್ತವಿಕ ಸಂಖ್ಯೆ | ಖಾಲಿ ಹುದ್ದೆಗಳ ಸಂಖ್ಯೆ | ವರ್ಗಾವಾರು ಸಿಬ್ಬಂದಿಗಳ ಸಂಖ್ಯೆ | |
|---|---|---|---|---|---|
| | | | | ಪುರುಷ | ಮಹಿಳೆ |
| ಗುಂಪು. 'ಎ' | 06 | 04 | 02 | 02 | 02 |
| ಗುಂಪು. 'ಬಿ' | 29 | 10 | 19 | 10 | - |
| ***ಗುಂಪು. 'ಸಿ'*** | 247 | 123 | 124 | 86 | 37 |
| ಗುಂಪು. 'ಡಿ' | 57 | 32 | 25 | 17 | 18 |
| **ಒಟ್ಟು** | **339** | **169** | **170** | **115** | **54** |

**ಇಲಾಖೆಯ ಗಣಕೀಕರಣ** – ಇಲಾಖೆಯ ಕೇಂದ್ರ ಕಾರ್ಯ ಸ್ಥಾನವು ಸಂಪೂರ್ಣ ಗಣಕೀಕೃತಗೊಂಡಿದ್ದು, ಬ್ರಾಡ್ ಬ್ಯಾಂಡ್ ಅಂತರ್ಜಾಲ ಸೌಲಭ್ಯ ಒದಗಿಸಲಾಗಿದೆ. ಸಿಬ್ಬಂದಿಗಳ ವೇತನವನ್ನು ಇ – ಆಡಳಿತ ಇಲಾಖೆಯ ಮಾನವ ಸಂಪನ್ಮೂಲ ನಿರ್ವಹಣಾ ವ್ಯವಸ್ಥೆಯಡಿಯಲ್ಲಿ (ಹೆಚ್ಆರ್ಎಂಎಸ್) ನಿರ್ವಹಿಸಲಾಗುತ್ತಿದೆ. ಎಲ್ಲಾ ಹಣ ಸೆಳೆಯುವ ಮತ್ತು ಬಟವಾಡೆ ಮಾಡುವ ಅಧಿಕಾರಿಗಳಿಗೆ ಗಣಕಯಂತ್ರಗಳನ್ನು ಮತ್ತು ಪೂರಕಗಳನ್ನು ಬ್ರಾಡ್‌ಬ್ಯಾಂಡ್ ಸೌಲಭ್ಯದೊಂದಿಗೆ ಒದಗಿಸಲಾಗಿದೆ.

**ಗೃಹರಕ್ಷಕದಳ ನಿರ್ದೇಶನಾಲಯ**

**2018-19 ನೇ ಸಾಲಿಗೆ ಹಂಚಿಕೆ ಮತ್ತು ವೆಚ್ಚವಾದ ಅನುದಾನದ ವಿವರ**

**4070-00-003-0-01 –386 – ನಿರ್ಮಾಣ**

**(ರೂ. ಲಕ್ಷಗಳಲ್ಲಿ)**

| ಕ್ರ. ಮ | ಕಾಮಗಾರಿ | 2018-19 | |
|---|---|---|---|
| | | ಹಂಚಿಕೆ | ವೆಚ್ಚ (30.1.19 ರಲ್ಲಿದ್ದಂತೆ) |
| 1. | ಅ) ದಾವಣಗೆರೆ ಜಿಲ್ಲೆಯ ಗೃಹರಕ್ಷಕ ಹಾಗೂ ಪೌರರಕ್ಷಣಾ ಪ್ರಾದೇಶಿಕ ತರಬೇತಿ ಕೇಂದ್ರದಲ್ಲಿ ಮಹಿಳಾ ಬ್ಯಾರಕ್ ನಿರ್ಮಾಣದ ಮುಂದುವರೆದ ಕಾಮಗಾರಿಗಾಗಿ | 77.50 | 58.12 |
| | ಆ) ಮಂಡ್ಯ ಜಿಲ್ಲಾ ಗೃಹರಕ್ಷಕ ದಳ ಕಚೇರಿ ಕಟ್ಟಡ & ಕಾಪೌಂಡ್ ನಿರ್ಮಾಣ | 50.00 | - |
| | ಇ) ಕೋಲಾರ ಜಿಲ್ಲಾ ಕೇಂದ್ರದಲ್ಲಿ ಗೃಹರಕ್ಷಕ ದಳ ಕಚೇರಿಗೆ ಡಾರ್ಮೆಟರಿ ಹಾಗೂ ಕಾಂಪೌಂಡ್ ನಿರ್ಮಾಣ. | 24.50 | 18.38 |
| | **ಒಟ್ಟು ರೂ.ಗಳು** | 152.00 | 76.50 |

**ಟಿಪ್ಪಣಿ:**

ಅ) ಕಾಮಗಾರಿಯು ಮುಕ್ತಾಯ ಹಂತದಲ್ಲಿದೆ.
ಆ) ಸರ್ಕಾರದಿಂದ ಅನುದಾನ ಬಿಡುಗಡೆ ನಿರೀಕ್ಷಿಸಲಾಗುತ್ತಿದೆ.
ಇ) ರೂ. 18.38 ಲಕ್ಷ ಹಣವನ್ನು ಕ.ರಾ.ಪೊ.ವ&ಮೂ.ಅ.ನಿ. ಇವರಿಗೆ ಸಂದಾಯ ಮಾಡಲಾಗಿದೆ.

**2019-20 ನೇ :-**

ಆರ್ಥಿಕ ಸಾಲಿಗೆ ಇದುವರೆವಿಗೂ ಯಾವುದೇ ಅನುದಾನ ಹಂಚಿಕೆಯಾಗಿರುವುದಿಲ್ಲ.

**8. ವೆಬ್ ಸೈಟ್:** ಸರ್ಕಾರದ ನಿರ್ದೇಶನದ ಮೇರೆಗೆ ಗೃಹರಕ್ಷಕದಳ ಮತ್ತು ಪೌರರಕ್ಷಣಾ ಇಲಾಖೆಯ ವಿವರಗಳನ್ನು ವೆಬ್ ಸೈಟ್‌ನಲ್ಲಿ ಅಪ್‌ಲೋಡ್ ಮಾಡಿದೆ.

**Website ID : www.karnataka.gov.in/hgcd**
**G –mail ID: hgcdhqrsban@gmail.com**

9. **ಅತ್ಯುತ್ತಮ ಸಾಧನೆಗಳು:** ಇಲಾಖೆಯಲ್ಲಿ ಅತ್ಯುತ್ತಮ ಸೇವೆಯನ್ನು ಸಲ್ಲಿಸಿದ ಗೃಹರಕ್ಷಕ ಹಾಗೂ ನೌಕರರನ್ನು ಗುರುತಿಸುವ ಸಲುವಾಗಿ ಮುಖ್ಯ ಮಂತ್ರಿಗಳ ಚಿನ್ನದ ಪದಕ, ರಾಷ್ಟ್ರಪತಿಗಳ ಶ್ಲಾಘನೀಯ ಸೇವಾ ಪದಕ ಮತ್ತು ವಿಶಿಷ್ಟ ಸೇವಾ ಪದಕಗಳನ್ನು ನೀಡಿ ಗೌರವಿಸಲಾಗುತ್ತಿದೆ. ಪದಕ ನೀಡಿಕೆಯ ವರ್ಷವಾರು ವಿವರಗಳು ಕೆಳಕಂಡಂತಿವೆ.

| ಕ್ರಮ ಸಂಖ್ಯೆ | ವರ್ಷ | | ಪದಕದ ವಿವರ | ಸ್ವೀಕರಿಸಿದ ವರ ಸಂಖ್ಯೆ |
|---|---|---|---|---|
| 1. | 2018–19 | ಎ | ರಾಷ್ಟ್ರಪತಿಯವರ ವಿಶಿಷ್ಟ/ಶ್ಲಾಘನೀಯ ಸೇವಾ ಪದಕ ಸ್ವಾತಂತ್ರ ದಿನಾಚರಣೆ – 2018<br>ವಿಶಿಷ್ಟ ಸೇವಾ ಪದಕ – 01<br>ಶ್ಲಾಘನೀಯ ಸೇವಾ ಪದಕ - 07 | 08 |
| | | ಬಿ | ರಾಷ್ಟ್ರಪತಿಯವರ ಶ್ಲಾಘನೀಯ ಸೇವಾ ಪದಕ ಗಣರಾಜ್ಯೋತ್ಸವ ದಿನಾಚರಣೆ – 2019<br>ವಿಶಿಷ್ಟ ಸೇವಾ ಪದಕ – 01<br>ಶ್ಲಾಘನೀಯ ಸೇವಾ ಪದಕ - 05 | 06 |

**2018–19ನೇ ಸಾಲಿನಲ್ಲಿ ಜಿಲ್ಲಾ ತರಬೇತಿ ಕೇಂದ್ರ ಕಟ್ಟಡ ನಿರ್ಮಾಣ ಮಾಡಲು ಕರ್ನಾಟಕ ಸರ್ಕಾರದ ಯೋಜನೆ ಅಡಿಯಲ್ಲಿ ಮಂಜೂರಿಸಿದ ಮತ್ತು ಬಿಡುಗಡೆ ಮಾಡಿದ ಅನುದಾನದ ವಿವರಗಳು**

| ಕ್ರ. ಸ | ಜಿಲ್ಲೆಗಳು | ನಿವೇಶನ ಹಚಿಚಿಕೆ ನೀಡಿದ ಸಂಸ್ಥೆ / ಪ್ರಾಧಿಕಾರ | ನಿವೇಶನದ ಅಳತೆ | ಒಟ್ಟು ಅನುದಾನ | ಬಿಡುಗಡೆಯಾದ ಅನುದಾನ (ರೂ. ಲಕ್ಷಗಳಲ್ಲಿ) |
|---|---|---|---|---|---|
| 1) | ದಾವಣಗೆರೆ | ಜಿಲ್ಲಾಧಿಕಾರಿಗಳು | 07 ಎಕರೆ | 155.00 | 77.50 |
| 2) | ಕೋಲಾರ | ಜಿಲ್ಲಾಧಿಕಾರಿಗಳು | 22 ಗುಂಟೆ | 64.60 | 18.38 |
| 3) | ಮಂಡ್ಯ | ಅಭಿವೃದ್ಧಿ ಪ್ರಾಧಿಕಾರ ಮಂಡ್ಯ | 02 ಗುಂಟೆ | 150.00 | 50.00 |

## ಹೊಳಹುಗಳು

## ಪೌರರಕ್ಷಣೆ ಇಲಾಖೆ :–

ಪೌರರಕ್ಷಣಾ ಸಂಸ್ಥೆಯು ಗೃಹರಕ್ಷಕದಳದೊಟ್ಟಿಗೆ ಕಾರ್ಯ ನಿರ್ವಹಿಸುತ್ತಿರುವ ಒಂದು ಸ್ವತಂತ್ರ ಸ್ವಯಂ ಸೇವಾ ಸಂಸ್ಥೆಯಾಗಿದೆ. ಬಾಹ್ಯ ಆಕ್ರಮಣ ಮತ್ತು ಪ್ರಾಕೃತಿಕ ವಿಕೋಪಗಳ ಸಂದರ್ಭಗಳಲ್ಲಿ ಜನ ಸಾಮಾನ್ಯರ ಜೀವ ಮತ್ತು ಆಸ್ತಿ ಸಂರಕ್ಷಣೆ ಮಾಡುವುದು ಈ ಸಂಸ್ಥೆಯ ಮುಖ್ಯ ಗುರಿಯಾಗಿದೆ. ಪೌರರಕ್ಷಣಾ ದಳವು ವಿವಿಧ ಪೌರರಕ್ಷಣಾ ಕ್ರಮಗಳನ್ನು ಅನುಷ್ಠಾನಗೊಳಿಸುವ ನಿಟ್ಟಿನಲ್ಲಿ ತನ್ನ ಸೇವೆಯನ್ನು ಸಮುದಾಯಕ್ಕೆ ಒದಗಿಸಲು ನಾಗರಿಕರನ್ನು ಸ್ವಯಂ ಸೇವಕರನ್ನಾಗಿ ಭರ್ತಿ ಮಾಡಿಕೊಂಡು ಅವರಿಗೆ ಪೌರರಕ್ಷಣಾ ವಿಷಯಗಳಲ್ಲಿ ತರಬೇತಿಯನ್ನು ನೀಡುತ್ತಿದೆ. ಕೇಂದ್ರ ಸರ್ಕಾರವು ಕರ್ನಾಟಕ ರಾಜ್ಯದಲ್ಲಿನ ಬೆಂಗಳೂರು ನಗರ, ಉತ್ತರಕನ್ನಡ ಜಿಲ್ಲೆಯ ಮಲ್ಲಾಪುರ (ಕೈಗಾ) ಹಾಗೂ ರಾಯಚೂರು ಜಿಲ್ಲೆಯ ಶಕ್ತಿನಗರವನ್ನು ಎರಡನೇ ದರ್ಜೆಯ ಪೌರರಕ್ಷಣಾ ಪಟ್ಟಣಗಳನ್ನಾಗಿ ಘೋಷಿಸಿ ಅದೇ ರೀತಿ ಮುಂದುವರೆದಿರುತ್ತದೆ.

ಈ ಜಿಲ್ಲೆಗಳಲ್ಲಿ ಪೌರರಕ್ಷಣಾ ನಿಯಂತ್ರಕರನ್ನು ನೇಮಕ ಮಾಡಲಾಗಿದ್ದು, ಪೌರರಕ್ಷಣಾ Paperplan ನ ಅನುಗುಣವಾಗಿ ಪೌರರಕ್ಷಣಾ ಚಟುವಟಿಕೆಗಳನ್ನು ಕೈಗೊಳ್ಳಲಾಗಿದೆ. ಈ ಇಲಾಖೆಗೆ ಡಿಜಿಪಿ ಶ್ರೇಣಿಯ ನಿರ್ದೇಶಕರು ಮುಖ್ಯಸ್ಥರಾಗಿರುತ್ತಾರೆ. ಗೃಹರಕ್ಷಕದಳದ ಮಹಾ ಸಮಾದೇಷ್ಟರೇ ಈ ಹುದ್ದೆಯನ್ನು ಹೊಂದಿರುತ್ತಾರೆ.

ಹೆಚ್ಚುವರಿ ನಿರ್ದೇಶಕರು ಹಾಗೂ ಉಪ ನಿರ್ದೇಶಕರು ನಿರ್ದೇಶಕರಿಗೆ ಸಹಾಯಕರಾಗಿ ಕಾರ್ಯ ನಿರ್ವಹಿಸುತ್ತಾರೆ. ಅಪರ ಪೋಲೀಸ್ ಮಹಾ ನಿರ್ದೇಶಕರು, ಗೃಹರಕ್ಷಕದಳ ಮತ್ತು ಪೌರರಕ್ಷಣೆ ಮತ್ತು ಉಪ ಮಹಾ ಸಮಾದೇಷ್ಟರುಗಳೇ ಅನುಕ್ರಮವಾಗಿ ಈ ಹುದ್ದೆಗಳನ್ನೂ ಹೊಂದಿದ್ದು ಕಾರ್ಯ ನಿರ್ವಹಿಸುತ್ತಾರೆ.

ಇಲಾಖಾ ಮುಖ್ಯಸ್ಥರಿಗೆ ಬೆಂಗಳೂರು ನಗರದ ಪೋಲೀಸ್ ಆಯುಕ್ತರು ಪೌರರಕ್ಷಣಾ ಕೇಂದ್ರ ಕಾರ್ಯಸ್ಥಾನದ ಸೇವೆಗಳ ನಿಯಂತ್ರಕರಾಗಿ ಸಹಾಯಕರಾಗಿರುತ್ತಾರೆ. ಹಾಗೆಯೇ, ಉತ್ತರಕನ್ನಡ ಮತ್ತು ರಾಯಚೂರು ಜಿಲ್ಲೆಯ ಜಿಲ್ಲಾಧಿಕಾರಿಗಳು ಮಲ್ಲಾಪುರ ಮತ್ತು ಶಕ್ತಿನಗರ ಪೌರರಕ್ಷಣಾ ಪಟ್ಟಣಗಳ ನಿಯಂತ್ರಕರಾಗಿ ಸಹಾಯಕರಾಗಿರುತ್ತಾರೆ.

ಭಾರತ ಸರ್ಕಾರವು ರಚಿಸಿದ ಪೌರರಕ್ಷಣಾ ಕಾಯ್ದೆ 1968 ಮತ್ತು ಅದರ ಅಡಿಯಲ್ಲಿ ರೂಪಿಸಿದ ಪೌರರಕ್ಷಣಾ ನಿಯಮಗಳು 1968 ರ ಅನ್ವಯ ಪೌರರಕ್ಷಣಾ ಚಟುವಟಿಕೆಗಳನ್ನು ಜಾರಿಗೊಳಿಸಲಾಗುತ್ತಿದೆ. ಭಾರತ ಸರ್ಕಾರವು ಸಿಬ್ಬಂದಿ ಸಂಖ್ಯಾಬಲದ ಮಾದರಿಯ ಬಗ್ಗೆ ಹೊರಡಿಸಿರುವ ಆದೇಶಗಳನ್ನು ಕ್ರೋಢೀಕರಿಸಿ ಮಾಸ್ಟರ್ ಪ್ಲಾನ್ ಎಂಬ ಪುಸ್ತಕ ಪ್ರಕಟಪಡಿಸಿದೆ. ಕೇಂದ್ರ ಸರ್ಕಾರದಿಂದ ಒದಗಿಸುವ ಧನಸಹಾಯದ ಬಗ್ಗೆ ಹೊರಡಿಸಿರುವ ಆದೇಶಗಳನ್ನು ಕ್ರೋಢೀಕರಿಸಿ ಕಂಪೆಂಡಿಯಂ ಆಫ್ ಇನ್‌ಸ್ಟ್ರಕ್ಷನ್ಸ್ ಎಂದು ಹೆಸರಿಸಿ ಪುಸ್ತಕ ಪ್ರಕಟಗೊಳಿಸಿದೆ. ರಾಜ್ಯ ಸರ್ಕಾರಗಳು ತಮ್ಮ ರಾಜ್ಯದಲ್ಲಿರುವ ಪೌರರಕ್ಷಣಾ ದಳದ ನಗರಗಳಿಗೆ ಅನ್ವಯವಾಗುವ ವರ್ಗೀಕರಣದ ಆಧಾರದ ಮೇಲೆ ಒದಗಿಸಬೇಕಾದ ಸೇವೆಗಳ ಬಗ್ಗೆ ಪೌರರಕ್ಷಣಾ ದಳದ ಸಾಮಾನ್ಯ ಸೂತ್ರಗಳನ್ನು ಜನರಲ್ ಪ್ರಿನ್ಸಿಪಲ್ಸ್ ಆಫ್ ಸಿವಿಲ್ ಡಿಫೆನ್ಸ್ ಎಂದು ಹೆಸರಿಸಿ ಕ್ರೋಢೀಕೃತ ಮಾಹಿತಿಯ ಬಗ್ಗೆ ಪುಸ್ತಕ ಪ್ರಕಟಿಸಿದೆ.

**2 ಮತ್ತು 3. ಮುನ್ನೋಟ (ಇಲಾಖೆಯ ಪ್ರಗತಿಯ ಬಗ್ಗೆ ಹೊಂದಿರುವ ಗುರಿ)**

ಬೆಂಗಳೂರು ನಗರವನ್ನು ಪೌರರಕ್ಷಣಾ ವಾರ್ಡನ್ ಸೇವೆಗಳಾಗಿ 65 ಡಿವಿಜನ್‌ಗಳಾಗಿ ವಿಂಗಡಿಸಲಾಗಿದೆ. ಪ್ರತಿಯೊಂದು ಡಿವಿಜನ್‌ಗೆ ಕನಿಷ್ಠ ಮಟ್ಟದಲ್ಲಿ ಪೌರರಕ್ಷಣಾ ಸ್ವಯಂ ಸೇವಕರನ್ನು ಭರ್ತಿ ಮಾಡಲು ಉದ್ದೇಶಿಸಲಾಗಿದೆ. ಬೆಂಗಳೂರು ನಗರದಲ್ಲಿ ಒಟ್ಟು 20,000 ವಾರ್ಡನ್ ಪೌರರಕ್ಷಣಾ ಸ್ವಯಂ ಸೇವಕರನ್ನು ಭರ್ತಿ ಮಾಡಿಕೊಳ್ಳುವ ಗುರಿ ಇಟ್ಟುಕೊಳ್ಳಲಾಗಿದೆ. ಸದ್ಯದಲ್ಲಿ 11550 ಸ್ವಯಂ ಸೇವಕರನ್ನು ನೋಂದಾಯಿಸಿಕೊಳ್ಳಲಾಗಿದೆ. ಇದು ಇಲಾಖೆಗೆ, ಇತರೆ ಎರಡನೇ ದರ್ಜೆ ಪೌರರಕ್ಷಣಾ ನಗರಗಳಿಗೆ ಒದಗಿಸಬೇಕಾದ ಪೌರರಕ್ಷಣಾ ಸೇವೆಗಳನ್ನು ಬೆಂಗಳೂರಿನಲ್ಲಿ ಚುರುಕುಗೊಳಿಸಲು ಸಾಧ್ಯವಾಗುವಂತೆ ಮಾಡಿದೆ. ವಾರ್ಡನ್ ಸೇವೆಯನ್ನು ಒಳಗೊಂಡಂತೆ ಒದಗಿಸಬೇಕಾದ ಇತರ ಎಲ್ಲಾ ಸೇವೆಗಳೂ ಸೇರಿ ಒಟ್ಟು ಒಂದು ಲಕ್ಷ ಸ್ವಯಂ ಸೇವಕರನ್ನು ನೋಂದಾಯಿಸಿಕೊಳ್ಳುವ ಉದ್ದೇಶವಿರುತ್ತದೆ.

ನೋಂದಾಯಿಸುವ ಪೌರರಕ್ಷಣಾ ವಾರ್ಡನ್‌ಗಳೂ ವಿವಿಧ ಪೌರರಕ್ಷಣಾ ಸೇವೆಗಳನ್ನು ಕಾರ್ಯಗತಗೊಳಿಸಲು ಸಮರ್ಥರಾಗುವಂತೆ ವಿವಿಧ ತರಬೇತಿಗಳನ್ನು ಪ್ರಸ್ತಾವಿಸಿದೆ. ಇಲಾಖೆಯ ಬೆಂಗಳೂರು ನಗರದ ವಿವಿಧ ಪ್ರಮುಖ ಸ್ಥಳಗಳನ್ನು ಗುರುತಿಸಿ ಮಾಲ್‌ಗಳು, ಚಿತ್ರಮಂದಿರಗಳು, ಶಾಲೆಗಳು ಇತ್ಯಾದಿ ಜನ ನಿಬಿಡ ಸ್ಥಳಗಳಲ್ಲಿ ಜನ ಸಾಮಾನ್ಯರಲ್ಲಿ ಅರಿವು ಮೂಡಿಸಲು ಪ್ರಾತ್ಯಕ್ಷಿಕೆ ಹಾಗೂ ಅಣುಕು ಪ್ರದರ್ಶನಗಳನ್ನು ಏರ್ಪಡಿಸಿ ತಿಳುವಳಿಕೆ ಮೂಡಿಸಲು ಏರ್ಪಾಡು ಮಾಡುತ್ತಿದೆ. ಈಗಾಗಲೇ 100 ಅಣುಕು ಪ್ರದರ್ಶನ ಹಾಗೂ ಪ್ರಾತ್ಯಕ್ಷಿಕೆಗಳನ್ನು ಏರ್ಪಡಿಸಲಾಗಿದ್ದು, ಪ್ರಸಕ್ತ ಆರ್ಥಿಕ ವರ್ಷದಲ್ಲಿ ಇನ್ನೂ 100 ಸ್ಥಳಗಳಲ್ಲಿ ಅಣುಕು ಪ್ರದರ್ಶನಗಳನ್ನು ಏರ್ಪಡಿಸಲು ಉದ್ದೇಶಿಸಿದ್ದು, ಇದು ಪ್ರತ್ಯಕ್ಷ ಹಾಗೂ ಪರೋಕ್ಷವಾಗಿ ಒಂದು ಲಕ್ಷ ಬೆಂಗಳೂರು ನಾಗರಿಕರಿಗೆ ಅರಿವು ಮೂಡಿಸಲು ಸಹಕಾರಿಯಾಗುತ್ತದೆ.

**4. ಇಲಾಖೆಯ ಉದ್ದೇಶಗಳು**

ಪೌರರಕ್ಷಣಾ ಇಲಾಖೆಯ ಪ್ರಮುಖ ಉದ್ದೇಶವು ಜೀವಗಳನ್ನು ಉಳಿಸುವುದು, ಜನ ಸಾಮಾನ್ಯರ ಆಸ್ತಿ ಪಾಸ್ತಿಗಳಿಗೆ ಶತ್ರು ದಾಳಿಯಿಂದ, ಮಾನವ ನಿರ್ಮಿತ ಪ್ರಕೃತಿ ವಿಕೋಪಗಳಿಂದ ಉಂಟಾಗಬಹುದಾದ ಹಾನಿಯನ್ನು ಕಡಿಮೆಗೊಳಿಸುವುದು ಮತ್ತು ಉತ್ಪಾದನೆಯು ನಿರಂತರವಾಗಿರುವಂತೆ ಕಾಯ್ದುಕೊಳ್ಳುವುದಕ್ಕೆ ನಾಗರಿಕರಿಗೆ ಸಹಾಯ ಹಸ್ತ ನೀಡುವುದ್ದಾಗಿದೆ. ಪೌರರಕ್ಷಣಾ ಕ್ರಮಗಳು ಇಲಾಖೆಗಳು ನಿರ್ವಹಿಸುವ ಸಾಮಾನ್ಯ ಕರ್ತವ್ಯಗಳನ್ನು ತುರ್ತು ಪರಿಸ್ಥಿತಿಗಳಿಗೆ ಹೊಂದಿಕೊಳ್ಳುವಂತೆ ರೂಪಿಸುವ ವಿಸ್ತರಿತ ಭಾಗವಾಗಿರುತ್ತದೆ.

**ಪೌರರಕ್ಷಣಾ ಕ್ರಮಗಳು ಕೆಳಕಂಡ ಸೇವೆಗಳನ್ನು ಒಳಗೊಂಡಿದೆ.**

1) ತರಬೇತಿ ಹಾಗೂ ಮನವರಿಕೆ
2) ಸಮನ್ವಯಗೊಳಿಸುವುದು ಮತ್ತು ನಿಯಂತ್ರಣಕ್ಕೊಳಪಟ್ಟ ಎಚ್ಚರಿಕಾ ಕ್ರಮ
3) ಗಾಯಾಳುಗಳನ್ನು ರಕ್ಷಿಸುವುದು
4) ಪ್ರಥಮ ಚಿಕಿತ್ಸೆ
5) ಸುರಕ್ಷಿತಾ ಪ್ರದೇಶ/ಭಾಗಕ್ಕೆ ಸಾಗಿಸುವುದು, ನಿರಾಶ್ರಿತರಿಗೆ ಪುನರ್ವಸತಿ ಅತ್ಯಾವಶ್ಯಕ ಸಾಮಗ್ರಿಗಳ ಶೇಖರಣೆ ಮತ್ತು ಹಂಚುವಿಕೆ
6) ಆಸ್ಪತ್ರೆಗಳನ್ನು ಮೀಸಲಿರಿಸುವುದು, ವೈದ್ಯರು ಮತ್ತು ದಾದಿಯರ ಸಿಬ್ಬಂದಿ ಒದಗಿಸುವುದು
7) ತುರ್ತು ಒಳಚರಂಡಿ ಮತ್ತು ಪರ್ಯಾಯ ನೀರು ಸರಬರಾಜು ವ್ಯವಸ್ಥೆ ಏರ್ಪಡಿಸುವುದು
8) ಸಾರಿಗೆ ವ್ಯವಸ್ಥೆ ಕ್ರೋಢೀಕರಿಸುವುದು
9) ಮನೆಗಳ ದುರಸ್ತಿ
10) ಬೆಳಕುಗಳ ನಿಯಂತ್ರಣ, ಸೂಕ್ಷ್ಮ ಸ್ಥಾವರಗಳನ್ನು ದಾಳಿಯಿಂದ ಕೃತ್ರಿಮಾಚ್ಛಾದನೆ ಮೂಲಕ ಬಚ್ಚಿಡುವುದು
11) ಬೆಲೆ ಬಾಳುವ ವಸ್ತುಗಳ ಸಂರಕ್ಷಣೆ
12) ಅತ್ಯಾವಶ್ಯಕ ಸೇವೆಗಳು ಮತ್ತು ಸೂಕ್ಷ್ಮ ಕೈಗಾರಿಕೆಗಳನ್ನು ರಕ್ಷಿಸಲು ವಿಶೇಷ ಕ್ರಮಗಳು
13) ಪ್ರಚಾರ ನೀಡುವುದು, ಸಾರ್ವಜನಿಕರ ಸಹಕಾರ ಪಡೆಯುವುದು

**5. ಅಧಿನಿಯಮ, ನಿಯಮಗಳ ಹಾಗೂ ಅಧಿಸೂಚನೆ**

**ಪೌರರಕ್ಷಣಾ ಅಧಿನಿಯಮ – 1968**

1. **ಅಧಿನಿಯಮದ ಹೆಸರು** –ಪೌರರಕ್ಷಣಾ ಅಧಿನಿಯಮ – 1968

2. **ಕ್ಷೇತ್ರಾಧಿಕಾರ ವ್ಯಾಪ್ತಿ** – ಭಾರತದ ಎಲ್ಲಾ ಪ್ರದೇಶಗಳು.

3. **ಪರಿಭಾಷೆ** – ರಕ್ಷಣೆಯನ್ನು ವಾಸ್ತವಿಕ ಯುದ್ಧದ ಮೂಲಕ ಒದಗಿಸುವುದನ್ನು ಹೊರತುಪಡಿಸಿ ಜನರಿಗೆ ಹಾಗೂ ಆಸ್ತಿ–ಪಾಸ್ತಿಗಳಿಗೆ, ಭಾರತದಲ್ಲಿರುವ ವಸ್ತುಗಳಿಗೆ ಮತ್ತು ಯಾವುದೇ ಪ್ರಾಂತ್ಯದ ಭಾಗಗಳಿಗೆ ಆಕ್ರಮಣಗಳಿಂದ ಅಂದರೆ, ಬಾಹ್ಯಾಕಾಶ, ಭೂಮಿ ಹಾಗೂ ಸಮುದ್ರ ದಾಳಿಯಿಂದ ಇತರ ಸಂರಕ್ಷಣಾ ಕಾರ್ಯ ಚಟುವಟಿಕೆಗಳಲ್ಲಿ ದಾಳಿ ವೇಳೆ ಹಾಗೂ ನಂತರದ ಸಮಯಗಳಲ್ಲಿ ತೊಡಗಿಸಬಹುದಾಗಿರುತ್ತದೆ.

4. **ಪೌರರಕ್ಷಣಾ ನಿಯಮಗಳನ್ನು ರಚಿಸುವ ಅಧಿಕಾರ**:– ಕೇಂದ್ರ ಸರ್ಕಾರಕ್ಕೆ ಪೌರರಕ್ಷಣೆ ಮತ್ತು ಅದಕ್ಕೆ ಸಂಬಂಧಿಸಿದಂತೆ ನಿಯಮಗಳನ್ನು ರೂಪಿಸುವುದಕ್ಕೆ ಅಧಿನಿಯಮದಲ್ಲಿ ಅವಕಾಶ ಕಲ್ಪಿಸಲಾಗಿದೆ.

5. **ಪೌರರಕ್ಷಣಾ ದಳ**:– ರಾಜ್ಯ ಸರ್ಕಾರವು ವ್ಯಕ್ತಿಗಳ ಸಮೂಹದ ಒಂದು ಸಂಸ್ಥೆಯನ್ನು ಪೌರರಕ್ಷಣಾ ದಳ ಎಂಬ ಹೆಸರಿನಲ್ಲಿ ರಚಿಸಲು ಮತ್ತು ಈ ದಳಕ್ಕೆ ಜಿಲ್ಲಾ ದಂಡಾಧಿಕಾರಿಯ ಶ್ರೇಣಿಗಿಂತ ಕಡಿಮೆ ಇಲ್ಲದ ಹುದ್ದೆಯಲ್ಲಿ ಸೇವೆ ಸಲ್ಲಿಸುತ್ತಿರುವ ವ್ಯಕ್ತಿಯನ್ನು ನೇಮಕ ಮಾಡುವ ಅಧಿಕಾರವನ್ನು ಹೊಂದಿರುತ್ತದೆ.

6. ಇದು ರಾಜ್ಯ ಸರ್ಕಾರವು ಈ ಪೌರರಕ್ಷಣಾ ನಿಯಂತ್ರಕರನ್ನು ಮತ್ತು ಸದಸ್ಯರನ್ನು ನೇಮಕ ಮಾಡುವ ಹಾಗೂ ವಜಾ ಮಾಡುವ ಅಧಿಕಾರ ನೀಡುತ್ತದೆ.

7. ಇದು ಮೇಲ್ಮನವಿಯ ವಿಷಯದ ಬಗ್ಗೆಯೂ ಅವಕಾಶ ಮಾಡಿಕೊಡುತ್ತದೆ



**<u>ಪೌರರಕ್ಷಣಾ ನಿಯಮಗಳು – 1968</u> :-**

ಪೌರರಕ್ಷಣಾ ನಿಯಮಗಳು 1968, ಈ ಕೆಳಕಂಡ ಕಾರ್ಯಾಚರಣೆಗಳನ್ನು ಪೌರರಕ್ಷಣಾ ಸ್ವಯಂಸೇವಕರು, ಕರ್ತವ್ಯ ನಿರ್ವಹಣಾ ಸಮಯದಲ್ಲಿ ಜಾರಿಗೊಳಿಸಬೇಕಾಗುತ್ತದೆ. ಅದರ ವಿವರಗಳು ಕೆಳಕಂಡಂತಿವೆ.

1. ಬೆಳಕುಗಳ ನಿಯಂತ್ರಣ.
2. ಬೆಂಕಿ ಉದ್ಭವವಾಗದಂತೆ ಮತ್ತು ಹರಡದಂತೆ ಕ್ರಮಗಳನ್ನು ತೆಗೆದುಕೊಳ್ಳುವುದು.
3. ಕೃತ್ರಿಮಾಚ್ಛದನೆ
4. ಅಪಾಯಕರ ವಸ್ತುಗಳನ್ನು ದೂರದಲ್ಲಿಡುವ ವ್ಯವಸ್ಥೆ ಮಾಡುವುದು.
5. ಗಾಯಗೊಂಡವರನ್ನು ಸಂರಕ್ಷಿಸಿ ಸ್ಥಳಾಂತರಿಸುವುದು.
6. ಸಂರಕ್ಷಿಸಿದವರಿಗೆ ವಸತಿ
7. ಮಾಹಿತಿಗಳ ನಿರ್ವಹಣೆ
8. ಅಪಾಯಕಾರಿ ಪಶುಗಳ ವಧೆ ಮಾಡುವುದಕ್ಕೆ ಅನುಮತಿ.
9. ನೀರು ಸರಬರಾಜು ನಿರ್ವಹಣೆ
10. ಸ್ಥಳೀಯ ಅಧಿಕಾರಿಗಳು ಮುಂಜಾಗ್ರತಾ ಕ್ರಮಕೈಗೊಳ್ಳಲು ಅಧಿಕಾರ.
11. ಪ್ರಧಾನ ರೇವುಗಳ ಮತ್ತು ಪರಿಸರ ಸಂರಕ್ಷಣೆ
12. ಕಾರ್ಖಾನೆಗಳು ಹಾಗೂ ಗಣಿಗಳ ಸಂರಕ್ಷಣೆ
13. ದಾಳಿಗಳಿಗೆ ಮುಂಜಾಗ್ರತಾ ಕ್ರಮಗಳು
14. ಅಗ್ನಿ ದುರಂತದ ಸ್ಥಳಗಳ ಪರಿಶೋಧನೆ
15. ಸ್ಥಳಗಳಲ್ಲಿ ಸುರಕ್ಷತೆ ಕ್ರಮಗಳು
16. ಖಾಯಿಲೆಗಳು ಹರಡುವುದನ್ನು ನಿಯಂತ್ರಿಸುವುದು
17. ವಿಮಾನ ದಾಳಿ ಆಶ್ರಯಗಳು
18. ಪೌರರಕ್ಷಣೆ ಪೂರ್ವಭಾವಿ ಅಭ್ಯಾಸಗಳು.

**ಗುಂಪುವಾರು ಮಂಜೂರಾಗಿರುವ ಹುದ್ದೆಗಳು:**

ಇಲಾಖೆಯಲ್ಲಿರುವ ನೌಕರರ ಸಂಖ್ಯೆ, ಪುರುಷರು, ಮಹಿಳೆಯರು ಕೆಳಕಾಣಿಸಿರುವಂತಿದೆ.

| ವರ್ಗಾವಾರು ಹುದ್ದೆ | ವರದಿಯ ಸಾಲಿನಲ್ಲಿ ಮಂಜೂರಾಗಿದ್ದ ಹುದ್ದೆಗಳ ಸಂಖ್ಯೆ | ವಾಸ್ತವಿಕ ಸಂಖ್ಯೆ | ಖಾಲಿ ಹುದ್ದೆಗಳ ಸಂಖ್ಯೆ | ವರ್ಗಾವಾರು ಸಿಬ್ಬಂದಿಗಳ ಸಂಖ್ಯೆ | |
|---|---|---|---|---|---|
| | | | | ಪುರುಷ | ಮಹಿಳೆಯರು |
| ಗುಂಪು . ಎ | – | – | – | – | – |
| ಗುಂಪು . ಬಿ | – | – | – | – | – |
| ಗುಂಪು . ಸಿ | 29 | 12 | 17 | 10 | 02 |
| ಗುಂಪು . ಡಿ | 01 | – | 01 | – | – |
| **ಒಟ್ಟು** | 30 | 12 | 18 | 9 | 02 |

## ಪೌರರಕ್ಷಣಾ ರಚನೆ ಪಟ್ಟಿ

